ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 29.07-2026:

ಅನುಮತಿಯ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆ: ಆರೋಪಿತರ ಪರ ವಕೀಲರಿಂದಃ

ನಾನು ಆರೋಪಿತರ ಮನೆಯಲ್ಲಿ ಭೋಗ್ಯಕ್ಕೆ ಇದ್ದ ಬಗೆ ಮಾಡಿಕೊಂಡ ಕರಾರು ನಿಪಿ-169(6) ಆಗಿರುತ್ತದೆ. ಅದರಲ್ಲಿ ನನ್ನ ಸಹಿ ಇರುತ್ತದೆ. ಸಾಕ್ಷಿಯು ಗುರುತಿಸಿದ ಸಹಿಯನ್ನು ನಿಪಿ-169(6)(1) ಎಂದುಗುರುತಿಸಲಾಯಿತು.

ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ

ನಾನು ನಿವೃತ್ತ ಬಿ ಎಸ್ ಎನ್ ಎಲ್ ನೌಕರ. ಜನವರಿ 2013 ರಿಂದ ನಾನು ಆರೋಪಿತರ ಮನೆಯಲ್ಲಿ ಭೋಗ್ಯಕ್ಕೆ ಸುಮಾರು 10 ವರ್ಷಗಳವರೆಗೆ ವಾಸವಿದ್ದೆನು. 10 ವರ್ಷಗಳ ಅವಧಿಗೂ ನಾನು ಭೋಗ್ಯ ಕರಾರು ಮಾಡಿಕೊಂಡಿದ್ದೇನಾ ಎಂದರೆ ಸಾಕ್ಷಿಯು 5 ವರ್ಷಗಳ ಅವಧಿಗೆ ನಿಪಿ-169(6)ರಂತೆ ಕರಾರು ಮಾಡಿಕೊಂಡಿದ್ದೆನು. 5 ವರ್ಷಗಳ ನಂತರ ಭೋಗ್ಯದ ಹಣವನ್ನು ಅವರು ವಾಪಸ್ ಕೊಟ್ಟರು, ನಾನು ಬಾಡಿಗೆದಾರನಾಗಿ 5 ವರ್ಷಗಳ ಕಾಲ ಮುಂದುವರೆದೆನು ಎನ್ನುತ್ತಾರೆ. ನಿಪಿ-169(6)ರಲ್ಲಿ ನಾನು 5 ವರ್ಷಗಳ ಅವಧಿಗೆ ಭೋಗ್ಯಕ್ಕೆ ಇದ್ದೆ ಎಂದು ಬರೆದಿದೆ. ಅದನ್ನು 3 ವರ್ಷಗಳ ಅವಧಿಗೆ ಮಾಡಿಕೊಂಡಿರುವುದು 5 ವರ್ಷಗಳ ಅವಧಿಗಲ್ಲ ಎಂದರೆ ಸರಿ. ಸಾಕ್ಷಿಯು ಮುಂದುವರೆದು ನಾನು 10 ವರ್ಷಗಳವರೆಗೂ ಅವರ ಮನೆಯಲ್ಲಿಯೇ ವಾಸವಿದ್ದೆನು ಎನ್ನುತ್ತಾರೆ. ನಾನು 5 ಲಕ್ಷ ರೂಪಾಯಿಗೆ ಚೆಕ್ಕು ಮತ್ತು 25ಸಾವಿರ ರೂಪಾಯಿ ನಗದಾಗಿ ನೀಡಿರುತ್ತೇನೆ. ಆ 5 ಲಕ್ಷ ರೂಪಾಯಿಯಲ್ಲಿ 4,40,000ರೂಪಾಯಿಗೆ ಇಂಡಿಯನ್ ಬ್ಯಾಂಕ್ ನ ಚೆಕ್ಕು ಉಳಿದ 60ಸಾವಿರ ರೂಪಾಯಿಗೆ ಕಾರ್ಪೊರೇಷನ್ ಬ್ಯಾಂಕಿನ ಚೆಕ್ಕು ನೀಡಿರುತ್ತೇನೆ. ಪೊಲೀಸರು ಈ ಬಗ್ಗೆ ನನ್ನನ್ನು ವಿಚಾರ ಮಾಡಲಿಲ್ಲ. ನನ್ನ ಬ್ಯಾಂಕ್ ಸ್ಟೇಟ್ಮೆಂಟನ್ನು ಹಾಜರುಪಡಿಸಲು ತೊಂದರೆ ಇತ್ತಾ ಎಂದರೆ ಬೇಕಿದ್ದರೆ ಕೊಡುತ್ತೇನೆ ಎನ್ನುತ್ತಾರೆ. ನಾನು 3 ವರ್ಷಕ್ಕೆ ಮಾತ್ರ ಅವರ ಮನೆಯಲ್ಲಿ ಭೋಗ್ಯಕ್ಕೆ ಇದ್ದೆನು, 10 ವರ್ಷಕ್ಕೆ ಇದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅವರ ಕೇಸಿಗೆ ಅನುಕೂಲವಾಗಲೆಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ.ಸ.ಇದೆ.

ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್

ನ್ಯಾಯಾಧೀಶರು, ಹಾಸನ.